**<u>ದಿ : 07-04-2025 ರಂದು ಸಾಕ್ಷಿ ದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಟಿ.ಎಂ.ಪಿ ವಕೀಲರಿಂದ</u> :**

ಅಪಘಾತ ಆದ ಕಾರಿನಲ್ಲಿ ನಾನು ಮಧ್ಯ ಸಿಟಿನಲ್ಲಿ ಕುಳಿತುಕೊಂಡಿದ್ದೆ, ಒಟ್ಟು ಏಳು ಜನ ಇದ್ದೆವು. ಅಪಘಾತವು ರಾತ್ರಿ 11.50 ಗಂಟೆಯ ಸಮಯದಲ್ಲಿ ಆಗಿದೆ. ಆ ಸಮಯದಲ್ಲಿ ನಾನು ನಿದ್ದೆ ಮಂಪರಿನಲ್ಲಿದೆ ಎಂದರೆ ಸರಿ. ಆ ಕಾರಣ ಅಪಘಾತ ಹೇಗಾಯಿತು ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

ಅಪಘಾತದಲ್ಲಿ ನನಗೆ ಬಲಗೈಗೆ ಪೆಟ್ಟಾಗಿರುತ್ತದೆ. ಪ್ರಥಮವಾಗಿ ಕಲ್ಗಟಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಒಂದು ದಿನ ಚಿಕಿತ್ಸೆ ಪಡೆದು ನಂತರ ಚಿನ್ಮಯಿ ಆಸ್ಪತ್ರೆಯಲ್ಲಿ ಒಂಬತ್ತು ದಿನ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಬಲಕೈಗೆ ಮೂಳೆಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಚಿಕಿತ್ಸೆಯ ನಂತರ ಮುರಿದ ಮೂಳೆ ಸರಿಯಾಗಿ ಜೋಡಣೆಯಾಗಿದೆ ಎಂದರೆ ಸರಿ, ನೋವು ಬರುತ್ತದೆ. ಹಾಗೇ ಗಾಯಗಳು ಗುಣವಾಗಿವೆ.

ಅಪಘಾತದ ಪೂರ್ವದಲ್ಲಿ ನಾನು ವಕೀಲರ ಆಫೀಸ್ ನಲ್ಲಿ ಬೆರಳಚ್ಚುಗಾರ್ತಿಯಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ರೂ.15,000/- ಸಂಬಳ ಕೊಡುತ್ತಿದ್ದರು. ಆ ಬಗ್ಗೆ ದಾಖಲೆ ಇಲ್ಲ, ನಗದಾಗಿ ನೀಡುತ್ತಿದ್ದರು. ಈಗಲೂ ಅದೇ ಉದ್ಯೋಗ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ, ಕಾರಣ ನೋವಿದೆ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿದಷ್ಟು ಹಣ ಪ್ರಯಾಣಕ್ಕಾಗಿ, ಊಟೋಪಚಾರಕ್ಕಾಗಿ ಹಾಗೂ ಇನ್ನಿತರ ಸಾಂದರ್ಭಿಕ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಕೋರಿ ಅರ್ಜಿಯನ್ನು ಕಾಲಮಿತಿಯೊಳಗೆ ಸಲ್ಲಿಸಿಲ್ಲ ಆದ್ದರಿಂದ ಪರಿಹಾರ ಪಡೆಯಲು ಬದ್ಧರಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪತ್ರವು ಸುಳ್ಳು ಅಂಶಗಳಿಂದ ಕೂಡಿದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ
ಅಪಘಾತ ಪರಿಹಾರ ಮಂಡಳಿ, ಕುಂದಾಪುರ**